
ಸಪತ್ನೀಕನಾಗಿ ಕಥಾನಾಯಕನ ಮನೆಗೆ ಬಂದು ಒಂದು ರಾತ್ರಿ ಉಳಿದುಕೊಂಡ. ತಡರಾತ್ರಿವರೆಗೂ ಈ ದಂಪತಿಯ ಜೊತೆ ಅವರ ಮಾತುಕತೆ ಮುಗಿದು ಪಕ್ಕದ ರೂಮಿಗೆ ಆ ದಂಪತಿ ಮಲಗಲು ಹೋಗಿ ಐದಾರು ನಿಮಿಷದಲ್ಲೇ ಹೆಣ್ಣು ಸಣ್ಣಗೆ ಹಿತವಾಗಿ ಮುಲುಕುವ ಶಬ್ದ ಕಥಾನಾಯಕನಿಗೂ ನಾಯಕಿಗೂ ಕೇಳಿಸಿತು. ಆ ಹೊತ್ತಿನಲ್ಲಿ ಪರಸ್ಪರ ದೂರವೇ ಮಲಗಿದ್ದ ಕಥಾನಾಯಕನಿಗೂ ನಾಯಕಿಗೂ ಅದು ಕೇಳಿಸಿ, ಇಬ್ಬರಲ್ಲೂ ತಾವು ಈತನಕ ಮಿಲನವಾಗದೇ ಇದ್ದದ್ದು ಸರಿಯಲ್ಲ ಎಂಬಂತಾಯಿತು. ಕಥಾನಾಯಕನು ಮೆಲ್ಲನೆ ಎದ್ದು ನಾಯಕಿಯ ಸಮೀಪಕ್ಕೆ ಬಂದ. ಅದನ್ನೇ ನಿರೀಕ್ಷಿಸುತ್ತಿದ್ದಂತೆ ಇದ್ದ ನಾಯಕಿಯೂ ನಾಯಕನ ಬಳಿಗೆ ಬಂದಳು. ಇಬ್ಬರೂ ಒಬ್ಬರಿಗೊಬ್ಬರು ತಿಳಿಯದಂತೆ ಅಥವಾ ಪರಸ್ಪರ ತಿಳಿದಂತೆ ಮುತ್ತಿಕ್ಕಿಕೊಂಡರು. ಕ್ಷಣಾರ್ಧದಲ್ಲಿ ತಮ್ಮನ್ನು ತಾವು ಮರೆತರು ಎಂದು ಮುಕ್ತಾಯಗೊಳಿಸಿದ ಕತೆಗಾರ, ಮುಂದಿನದು ನಿಮಗೆ ಗೊತ್ತಿದ್ದದ್ದೇ ಎಂಬ ಆಶ್ಚರ್ಯ ಚಿಹ್ನೆಯಲ್ಲಿ ಕತೆಯನ್ನು ಮುಗಿಸಿದ್ದ.

ಕತೆ ಓದಿ ಬದಿಗಿರಿಸಿದಾಗ ರಾಯರಿಗೆ ಥಟ್ಟನೆ ಸರೋಜಳ ನೆನಪು ಬಂತು. ಜೊತೆಗೆ ತಮ್ಮ ಮೊದಲ ರಾತ್ರಿಯ ನೆನಪೂ ಅದರ ಹಿಂದೆಯೇ ಇತ್ತು. ನಮ್ಮಿಬ್ಬರಲ್ಲಿ ಯಾರು ಮೊದಲು ಮುಂದುವರೆಯುವುದು ಎಂಬ ಪ್ರಶ್ನೆ ಆ ದಿನಗಳಲ್ಲಿ ಇಬ್ಬರಲ್ಲೂ ಇದ್ದದ್ದು ಹೌದು! ಮೊದಲ ರಾತ್ರಿಗಿಂತ ಮೊದಲಿನ ಭೇಟಿಗಳಲ್ಲಿ ಪ್ರತಿಸಲವೂ ತಾವು ಪರಸ್ಪರ ಆಕಸ್ಮಿಕವಾಗಿ ಸ್ಪರ್ಶಿಸುವಾಗ ಆಗುತ್ತಿದ್ದ ರೋಮಾಂಚನವು ಆ ದಿನ ಯಾಕೋ ಹಿಂದೆ ಸರಿದಂತಾಗಿ ಸರೋಜಳೇ ತನ್ನ ಬಳಿಗೆ ಬರಲಿ ಎಂಬ ಮನೋಭಾವ ರಾಯರಲ್ಲಿ ಹುಟ್ಟಿದ್ದರೆ, ಸರೋಜಳಿಗೆ ರಾಯರೇ ಮುಂದೆ ಬರಬೇಕೆಂಬ ನಿರೀಕ್ಷೆ ಇತ್ತು. ಇದು ಇಬ್ಬರ ಗಮನಕ್ಕೂ ಬಂದದ್ದರಿಂದ ರಾಯರಿಗೆ ಆ ರಾತ್ರಿ ಹೆಣ್ಣಿನ ದೇಹವನ್ನು ಗಂಡು ಸಹಜವಾಗಿ ಪಡೆದುಕೊಳ್ಳುವುದು ಅಥವಾ ಹೆಣ್ಣಿಗೆ ತನ್ನ ದೇಹವನ್ನು ಗಂಡಿಗೆ ಸಹಜವಾಗಿ ಒಪ್ಪಿಸಿಕೊಳ್ಳುವುದು ತೀರ ಅಪರೂಪದ್ದು ಎನ್ನುವುದು ಸಣ್ಣಗೆ ಹೊಳೆದಿತ್ತು. ಯಾಕೆ ಇದು ಹೊಳೆದಿತ್ತು ಎಂದುಕೊಳ್ಳುವಷ್ಟರಲ್ಲಿ ರಾಯರು ಸರೋಜ ತನ್ನ ಬಳಿ ನಿಧಾನವಾಗಿ ಬರುತ್ತಿದ್ದ ಹಾಗೆ ತಾನು ಅವಳ ದೇಹದ ಮೇಲೆ ಅಧಿಕಾರವುಳ್ಳವನಂತೆ ವರ್ತಿಸಿದ್ದು ತಪ್ಪಲ್ಲವೇ? ಎಂದು ಆಮೇಲೆ ಮುಜುಗರಪಟ್ಟಿದ್ದರು. ಅದೇ ಹೊತ್ತಿಗೆ ನಿಧಾನವಾಗಿ ರೋಮಾಂಚನಗೊಳ್ಳುತ್ತಿದ್ದ ಸರೋಜ, 'ರೀ ನನಗೂ ಸ್ವಲ್ಪ ಅವಕಾಶ ಕೊಡಿ. ನನ್ನ ದೇಹದಲ್ಲಿ ನಿಮಗೆಷ್ಟು ಅಧಿಕಾರವಿದೆಯೋ ಅಷ್ಟೇ ನಿಮ್ಮ ದೇಹದಲ್ಲಿ ನನಗೂ ಅಧಿಕಾರ ಇದೆ' ಎಂದು ಪಿಸುಗುಟ್ಟಿದ್ದು ರಾಯರಿಗೆ ಮುಂದೆ ಸದಾ ಕಾಡುತ್ತಿತ್ತು.

ಆ ನೆನಪುಗಳೆಲ್ಲ ಮುಂದೆ ಬರುತ್ತಿದ್ದಂತೆ ರಾಯರಿಗೆ ತಾನು ಓದಿದ 'ಕತೆಯಿಲ್ಲದ ಕತೆ ಕತೆಯಾದ ಕತೆ' ತುಂಬಾ ಚೆನ್ನಾಗಿದೆ, ಗಂಡು ಹೆಣ್ಣಿನ ಜೀವಭಾವಗಳ ಕಲ್ಪನೆ ತುಂಬಾ ಸಶಕ್ತವಾಗಿ ನಿರೂಪಿಸಲ್ಪಟ್ಟಿದೆ ಎಂದು ಅನಿಸಿತು. ಇನ್ನೊಂದು ಕತೆ

## ಕಳೆದ ಸಂಚಿಕೆಯಲ್ಲಿ



ಜಯಂತಿ ಮೂಲಕ ಕೈ ಸೇರಿದ ವಿದ್ಯಾರ್ಥಿ ಕಥಾಸ್ಪರ್ಧೆಯ ಕಥೆಗಳ ಕಟ್ಟು ಹಿಡಿದ ಶ್ರೀನಿವಾಸರಾಯರು ಕಥೆಗಳ ಜಗತ್ತಿನಲ್ಲಿ ಸಂಚರಿಸತೊಡಗಿದರು. ನೀಳ್ಗತೆಯೊಂದು ರಾಯರ ಗಮನಸೆಳೆಯಿತು. ಕಥೆ ಓದುತ್ತಾ ಓದುತ್ತಾ ಮಂಪರಿಗೆ ಜಾರಿದ ಅವರು, ಮತ್ತೆ ಎಚ್ಚೆತ್ತಾಗ ಕಥೆ ಯಾವುವುದೋ ನೆನಪುಗಳನ್ನು ಮೀಟುತ್ತಿದೆ ಎನ್ನುವ ಭಾವನೆಗೆ ಒಳಗಾದರು. ಕಥೆಯ ಪಾತ್ರವೊಂದು ಅಮ್ಮನನ್ನು ನೆನಪಿಸಿತು. ಬಾಲ್ಯದ ಯಾವಯಾವುದೋ ನೆನಪುಗಳು ಗರಿಬಿಚ್ಚಿದವು. ಗೋವಿಂದ ಭಟ್ಟ ಮತ್ತು ಕುಪ್ಪಣ್ಣ ಭಟ್ಟರು ಮನಸ್ಸಿನ ಮೂಲೆಗಳಿಂದ ಎದ್ದುನಿಂತರು. ಇಬ್ಬರೂ ಮಹಾ ವಿದ್ಯಾವಂತರು. ಗೋವಿಂದ ಭಟ್ಟರದು ಲೋಕಹಿತವನ್ನು ಸಾಧಿಸುವ ವಿದ್ಯೆ. ಕುಪ್ಪಣ್ಣ ಭಟ್ಟರದು ಜನರನ್ನು ಮರುಳುಗೊಳಿಸುವ ಕಣ್ಕಟ್ಟಿನ ಬಗೆಯ ವಿದ್ಯೆ. ಒಬ್ಬರು ಮಠ ಮತ್ತು ಸಮಾಜಗಳ ಮನ್ನಣೆಗೆ ಪಾತ್ರರಾದರೆ, ಮತ್ತೊಬ್ಬರಿಂದ ಊರಿನಲ್ಲಿ ಆತಂಕದ ವಾತಾವರಣ ಉಂಟಾಯಿತು. ಜಯದೇವಪ್ಪನಿಗೆ ಇಂದ್ರಾಣಿಯನ್ನು ವಶ ಮಾಡಿಕೊಡುವ ವಿಷಯಕ್ಕೆ ಸಂಬಂಧಿಸಿದಂತೆ ಆ ಆತಂಕ ಮತ್ತಷ್ಟು ತಾರಕಕ್ಕೇರಿತು.

'ಹೆಸರಿಟ್ಟು ಕರೆಯುವ ಕಷ್ಟ' ಎನ್ನುವುದನ್ನು ನಾಳೆ ಓದಬೇಕೆಂದು ತಾನು ತೆಗೆದಿಟ್ಟುಕೊಂಡದ್ದನ್ನು ಅವರು ನೆನಪಿಸಿಕೊಂಡು, ಈಗ ಹೇಗೂ ಎಚ್ಚರವಾಗಿದೆ, ಈಗಲೇ ಓದಿ ಮುಗಿಸಿದರೆ ಹೇಗೆ? ಎಂದುಕೊಂಡು ರೀಸಸ್‌ಗೆ ಹೋಗಿ ಬಂದು ಲೈಟ್ ಹಾಕಿದರು. ಆದರೆ ತಕ್ಷಣ ಬೇಡ ಅನಿಸಿ, 'ನಾಳೆ ಓದಿದರಾಯಿತು' ಎಂದು ಆ ಕತೆಯ ಹಾಳೆಗಳನ್ನು ಮಡಚಿಟ್ಟರು.

ರಾಯರು ಕಣ್ಣುಮುಚ್ಚಿ ನಿದ್ದೆ ಹೋಗಬೇಕು ಎನ್ನುವಷ್ಟರಲ್ಲಿ ಅವರ ಹೆತ್ತಮ್ಮ ಕಣ್ಣಮುಂದೆ ಮತ್ತೆ ಬಂದು ನಿಂತಂತಾಯಿತು. ಇದು ಕನಸೇ ಎಂದರೆ, ಇದು ಕನಸಾಗಲು ಹೇಗೆ ಸಾಧ್ಯ? ಎಂದು ಅವರು ಕಣ್ಣು ತೆರೆದು ನೋಡಿ ಮತ್ತೆ ಕಣ್ಣು ಮುಚ್ಚಿದರೂ ಅದು ಹೌದು ಎನ್ನುವಂತಾಯಿತು. ತನ್ನ ಅಮ್ಮನದ್ದೇ ಕಣ್ಣು, ಅವರದ್ದೇ ಮೂಗು, ಅವರದ್ದೇ ಗುಂಗುರು ಕೂದಲು, ಸದಾ ಕೆಂಪಾಗಿಯೇ ಇರುತ್ತಿದ್ದ ತುಟಿಗಳು, ಗುಲಾಬಿಯ ದಳಗಳ ಹಾಗೆ ಇದ್ದ ಕಿವಿಗಳು, ಅವುಗಳಲ್ಲಿ ಇದ್ದ ಪುಟ್ಟ ಟಿಕ್ಕಿ, ಎಲ್ಲವೂ ಅವರಿಗೆ ಇದಿರಾದಂತಾಗಿ ಆಹಾ! ಅಮ್ಮ ಅಂದರೆ ಹೇಗಿರಬೇಕು ಎನ್ನುವುದಕ್ಕೆ ಸರಿಯಾಗಿಯೇ ತನ್ನ ಅಮ್ಮ ಇದ್ದಳು ಎಂದುಕೊಂಡರು. ಆಕೆಗೆ ತನ್ನ ನಡೆನುಡಿಗೆ ತಕ್ಕುದಾದ ಹೆಸರು ಸೌಮ್ಯ! ಹೌದು, ತಪ್ಪಿಯೂ ರಾಯರ ಅಮ್ಮ ಯಾರಲ್ಲೂ ಕೋಪಿಸಿಕೊಂಡವಳಲ್ಲ. ಜಗಳವಾಡಿದವಳಲ್ಲ, ದನಕರು ನಾಯಿಗಳನ್ನೂ ದಟ್ಟಿಸಿ ಬೈದವಳಲ್ಲ. ಇಂಥ ತನ್ನ ಅಮ್ಮ ಸತ್ತು ಆಗಲೇ ಇಪ್ಪತ್ತು ವರುಷಗಳೇ ಕಳೆದುಹೋಗಿವೆಯಲ್ಲ? ಆದರೆ ಆಕೆ ನಿನ್ನೆ ಮೊನ್ನೆ ಸತ್ತ ಹಾಗೆ ತನಗೆ ಈಗಲೂ ಕಾಣಿಸುತ್ತಿದೆ. ಅಥವಾ ಒಮ್ಮೊಮ್ಮೆ ಆಕೆ ಸತ್ತೇ ಇಲ್ಲ ಎನ್ನುವಂತೆ ಭಾಸವಾಗುತ್ತದೆ ಎಂದು ರಾಯರು ಅಮ್ಮನನ್ನು ಸುಮ್ಮನೇ ಧ್ಯಾನಿಸತೊಡಗಿದರು.

ರಾಯರು ಧ್ಯಾನಸ್ಥ ಸ್ಥಿತಿಯಲ್ಲಿ ಕಣ್ಣುಜ್ಜಿಕೊಂಡಾಗ, 'ಇಲ್ಲ ಈ ಕತ್ತಲೆಯಲ್ಲಿ ಅಮ್ಮ ಇರುವುದು ಸಾಧ್ಯವೇ ಇಲ್ಲ. ಅವಳು ತನ್ನ ಬದುಕನ್ನು ಬೆಳಕಿಗೆ ತರುವವಳೇ ಅಲ್ಲ ಎನ್ನುವಂತೆ ಬಾಳಿದವಳು' ಎನ್ನುವುದು ನೆನಪಾಯಿತು.

ಲೋಕದ ಕಣ್ಣಿಗೆ ತನ್ನ ಅಪ್ಪ ಅನ್ನುವವನು ಶಿವರಾಯನಾಗಿದ್ದರೂ ಆತ ಯಾವತ್ತೂ ಅಮ್ಮನಿಗೆ ಗಂಡನಾಗಿರಲಿಲ್ಲ. ಮಾತ್ರವಲ್ಲ, ವಾಸ್ತವವಾಗಿಯೂ ಆತ ತನಗೆ ಅಪ್ಪನಾಗಿರಲಿಲ್ಲ ಎನ್ನುವ ಸತ್ಯ ಗೊತ್ತಾದದ್ದು ರಾಯರು ಐದನೇ ಇಯತ್ತೆಯಲ್ಲಿದ್ದಾಗ. ಆ ಸತ್ಯ ರಾಯರಿಗೆ ಗೊತ್ತಾದ ಮೇಲೆ ಆ ರಹಸ್ಯದ ವಿಚಾರವನ್ನು ರಾಯರ ಅಮ್ಮ ಆತನಕ ಹೇಗೆ ತನಗೆ ಹೇಳದೆ ಕಾಪಾಡಿದ್ದಳು ಎನ್ನುವುದು ರಾಯರಿಗೆ ಈಗಲೂ ಅರ್ಥವಾಗುವುದಿಲ್ಲ. ಇಷ್ಟಕ್ಕೂ ರಾಯರ ಮನೆಯಲ್ಲಿ ಆಗ ಇದ್ದವರು ಅಂದರೆ ಮೂವರೇ.

ಅಮ್ಮನ ಅಮ್ಮ ಅಂದರೆ ಅಜ್ಜಿ ಶಾರದಮ್ಮ, ಅಮ್ಮ ಮತ್ತು ತಾನು! ಅಜ್ಜಿಯನ್ನು ತಾನು ನೋಡುವಾಗ ಆಕೆಗೆ ಇರುಳುಗಣ್ಣು ಆಗಿತ್ತು ಅಂದರೆ ಅದೂ ನನಗೆ ಗೊತ್ತಾದದ್ದೂ ರಾಯರ ಅಮ್ಮನಿಂದಾಗಿಯೇ! ದೊಡ್ಡವನಾದ ಮೇಲೆ ಈ 'ದೊಡ್ಡ' ಅರ್ಥಾತ್ ಅಜ್ಜಿಯನ್ನು ತಾನು ನೋಡುವ ಪ್ರತಿ ಕ್ಷಣದಲ್ಲೂ ರಾಯರು ಈ ಕಾರಣದಿಂದ 'ಅಯ್ಯೋ' ಎಂದುಕೊಂಡದ್ದುಂಟು.

ರಾಯರು ಎಳವೆಯಲ್ಲಿ ಅಂದರೆ ಅಜ್ಜಿಗೆ ನಲುವತ್ತರ ಸುಮಾರಿಗೆ ಅದಾವುದೋ ಅರ್ಥವಾಗದ ಜ್ವರ ಬಂದು ಆಕೆಯ ಕಿವಿಯೂ ಕಿವುಡಾದದ್ದು ರಾಯರಿಗೆ ತಿಳಿಯದಿದ್ದರೂ ರಾಯರಿಗೆ ಆಮೇಲೆ ಅವರ ಅಮ್ಮ ಹೇಳಿದ್ದಳು. ಹೀಗಾಗಿ ರಾಯರಿಗೆ ಅಜ್ಜಿ ಎನ್ನುವವರು ಇದ್ದುದು ಕೇವಲ ರೂಪಕದ ಅಜ್ಜಿಯಾಗಿ ಅಥವಾ ಮನೆಗೊಬ್ಬಳು ಅಜ್ಜಿ ಬೇಕೆನ್ನುವಂತೆ.

ಈ ಅಜ್ಜಿಯ ಗಂಡ ಅಂದರೆ ಸೌಮ್ಯನ ಅಪ್ಪ ನಾರ್ಣಪ್ಪಯ್ಯ ದೊಡ್ಡ ಮದ್ದಳೆಗಾರ. ಯಕ್ಷಗಾನದ ಹುಚ್ಚಿನಲ್ಲಿ ಬೇಸಗೆಯಲ್ಲಿ ಸದಾ ಬಯಲಾಟದ ಕಲಾವಿದರಾಗಿ ಆತ ಊರೂರು ಸುತ್ತುತ್ತಿದ್ದ. ಮಳೆಗಾಲದಲ್ಲೂ ಆತ ಅಲ್ಲಿ ಇಲ್ಲಿ ನಡೆಯುವ ತಾಳಮದ್ದಳೆ ಕೂಟಕ್ಕೆ ಹೋಗುತ್ತಿದ್ದ. ಕುರೂಪಿ ಅಲ್ಲದ ಆದರೆ ಸುರೂಪಿಯೂ ಆಗಿರದ, ಉಬ್ಬು ಹಲ್ಲಿನ ಅಜ್ಜಿಯಲ್ಲಿ ಅಜ್ಜನಿಗೆ ಹೆಚ್ಚು ಆತ್ಮೀಯತೆ ಇರಲಿಲ್ಲ. ಅಜ್ಜ ಗಾಣಿಗರ